**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

**ಕ್ರಿ ಮೊ ಸಂಖ್ಯೆ 563/2023**

**ಪಿರ್ಯಾದಿಃ** **ಶ್ರೀ ಓಂಕಾರ**

**-ವಿರುದ್ದ-**

**ಆರೋಪಿ/ತರುಃ** **ಶ್ರೀ ಆರ್.ಮಹೇಶ**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆ-1: ನೀವು ಸಾಕ್ಷಿದಾರರ ಸಾಕ್ಷ್ಯದ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉತ್ತರ: Yes

ಪ್ರಶ್ನೆ-2: ಪಿಡಬ್ಲೂ-1. ಶ್ರೀ ಓಂಕಾರ ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಗೃಹಕೃತ್ಯದ ಮತ್ತು ಸಾಲ ತಿರುವಳಿ ಉದ್ದೇಶಕೋಸ್ಕರ ದಿನಾಂಕ 12.10.2021 ರಂದು ರೂ.2,50,000/- ಗಳನ್ನು ಪಡೆದು ಸದರಿ ಹಣವನ್ನು ಒಂದು ವರ್ಷದ ಒಳಗಾಗಿ ವಾಪಸ್ಸು ನೀಡುತ್ತೇನೆಂದು ಹೇಳಿ, ಅದೇದಿನ 12.10.2022 ರ ದಿನಾಂಕವನ್ನು ನಮೂದಿಸಿ ಕೆನರಾ ಬ್ಯಾಂಕ್, ಲಕ್ಕವಳ್ಳಿ ಶಾಖೆಗೆ ಸೇರಿದ ಚೆಕ್ ಸಂಖ್ಯೆ 278343 ನ್ನು ರೂ.2,50,000/- ಗಳಿಗೆ ನೀಡಿದ್ದು, ಪಿರ್ಯಾದುದಾರರು ಸದರಿ ಹಣವನ್ನು ಹಿಂದಿರುಗಿಸಲು ಕೇಳಿದಾಗ, ನೀವು ಆರೋಪಿ ಸದರಿ ಹಣವನ್ನು ಬ್ಯಾಂಕಿನಲ್ಲಿ ಪಡೆದುಕೊಳ್ಳಿ ಎಂದು ತಿಳಿಸಿದ ಮೇರೆಗೆ ಸದರಿ ಚೆಕ್ಕನ್ನು ಸಿ.ಡಿ.ಸಿ.ಸಿ ಬ್ಯಾಂಕ್ ತರೀಕೆರೆ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕು ಆರೋಪಿಯಾದ ನಿಮ್ಮ ಖಾತೆಯಲ್ಲಿ '**Drawer signature not as per mandate**' ಎಂಬ ಕಾರಣಕ್ಕಾಗಿ ಅಮಾನ್ಯಗೊಂಡಿದೆ ಎಂದು ಹಿಂಬರಹ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-3: ಪಿಡಬ್ಲ್ಯೂ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅನಂತರ ಪಿರ್ಯಾದಿಯು ದಿನಾಂಕ 19.10.2022 ರಂದು ವಕೀಲರ ಮೂಲಕ ನೋಟೀಸ್ ನೀಡಿದ್ದು ಅದು ಆರೋಪಿಯಾದ ನಿಮಗೆ ದಿನಾಂಕ 21.10.2022 ರಂದು ತಲುಪಿದ್ದರೂ ಸಹ ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಮತ್ತು ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-4: ಪಿಡಬ್ಲ್ಯೂ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಮೋಸ ಮಾಡುವ ಉದ್ದೇಶದಿಂದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ವಿಚಾರ ತಿಳಿದಿದ್ದರೂ ಸದರಿ ಚೆಕ್ ನ್ನು ತನಗೆ ನೀಡಿರುತ್ತೀರಿ, ನಂತರ ತಾನು ಆರೋಪಿಯಾದ ನಿಮಗೆ ನೋಟೀಸು ನೀಡಿದರೂ ಸಹ ಆರೋಪಿಯಾದ ನೀವು ಸದರಿ ಸಾಲದ ಹಣವನ್ನು ಹಿಂತಿರುಗಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: False

ಪ್ರಶ್ನೆ-5: ನೀವು ಏನಾದರೂ ಹೇಳುವುದಿದೆಯಾ?
ಉತ್ತರ: Not at this moment

ಪ್ರಶ್ನೆ-6: ಈ ಪ್ರಕರಣದಲ್ಲಿ ನಿಮ್ಮ ಪರ ಸಾಕ್ಷಿ/ಪ್ರತಿರಕ್ಷಣೆ ಏನಾದರೂ ಇದೆಯೇ?

ಉತ್ತರ: Yes

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಆರೋಪಿಯ ಉತ್ತರನ್ನು ಯಥಾವತ್ತಾಗಿ ದಾಖಲಿಸಿದ್ದೇನೆ.)

ದಿನಾಂಕ: 06.10.2025 ಸಹಿ/-

**(ರಾಹುಲ್ ಶೆಟ್ಟಿಗಾರ್)**
**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ**
**ಪ್ರ.ದ.ನ್ಯಾ.ದಂ., ತರೀಕೆರೆ.**